ಓಎಸ್. ನಂ.171/2023

ಡಿ.ಡಬ್ಲ್ಯೂ: 2

**ದಿನಾಂಕಃ 12-02-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲು: ವಾದಿ ಪರ ಶ್ರೀಮತಿ ಎಸ್.ಎಂ.ಪಿ ವಕೀಲರಿಂದಃ**

ನಮ್ಮ ಅಜ್ಜನ ಹೆಸರು ಬಾವಾಜಿ ಇರುತ್ತದೆ. ಸದರಿ ಬಾಬಾಜಿಗೆ ಒಬ್ಬ ಲಾಳೆಮಾ ಎನ್ನುವ ಒಬ್ಬ ಹೆಣ್ಣು ಮಗಳು, ಐದು ಜನ ಗಂಡು ಮಕ್ಕಳು ಇರುತ್ತಾರೆ. ಸದರಿಯವರು ಎಂದರೆ ನನ್ನ ತಂದೆಯಾದ ಪೀರಸಾಬ್, ಹುಸೇನಸಾಬ್, ಬಾಷೆಸಾಬ್, ಲಾಳೆಸಾಬ್ ಮತ್ತು ನಬಿಸಾಬ್ ಅಂತ ಇರುತ್ತಾರೆ. ಸದರಿಯವರ ಪೈಕಿ ನಬಿಸಾಬನ ಹೆಂಡತಿ ಮತ್ತು ಪೀರಸಾಬನ ಹೆಂಡತಿಯಾದ ಅಂದರೆ ಪ್ರತಿವಾದಿ ನಂ.1 ಮತ್ತು 8 ರವರು ಅಕ್ಕ ತಂಗಿಯರು ಇರುತ್ತಾರೆ ಎಂದರೆ ನಿಜ. 1 ರಿಂದ 3 ಮತ್ತು 7 ರಿಂದ 11 ನೇ ಪ್ರತಿವಾದಿ ಬನ್ನಟ್ಟಿ ಗ್ರಾಮದಲ್ಲಿ ಇರುತ್ತಾರೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಬೇರೆ ಬೇರೆ ಮನೆಯಲ್ಲಿ ಇರುತ್ತಾರೆ ಎಂದು ನುಡಿಯುತ್ತಾರೆ. ಬನ್ನಟ್ಟಿಯಲ್ಲಿರುವ ಮನೆ ನನ್ನ ಹೆಸರಿನಲ್ಲಿ ಇರುತ್ತದೆ. ಸದರಿ ಮನೆ ಮೊದಲು ನನ್ನ ತಮ್ಮನ ಹೆಸರಿನಲ್ಲಿ ಇತ್ತು. ನಮ್ಮ ತಮ್ಮನಿಗೆ ಸದರಿ ಮನೆ ಖರೀದಿ ಮುಖಾಂತರ ಬಂದಿರುತ್ತದೆ.

2. ನನ್ನ ಚಿಕ್ಕಮ್ಮಳಾದ 7 ನೇ ಪ್ರತಿವಾದಿ ವಾಸಿಸುವ ಮನೆ ಯಾರ ಹೆಸರಿನಲ್ಲಿ ಇರುತ್ತದೆ ಅಂತ ನನಗೆ ಗೊತ್ತಿಲ್ಲ. ಸದರಿ ಬನ್ನಟ್ಟಿಯಲ್ಲಿ ಇರುವ ಮನೆ ನನ್ನ ಅಜ್ಜನಿಂದ ಬಂದಿರುತ್ತದೆಯೋ ಅಥವಾ ಅವರು ಖರೀದಿಸಿದಾ ಆಸ್ತಿ ಇರುತ್ತದೆಯೋ ಎಂದು ಕೇಳಲು ಸಾಕ್ಷಿಯು ನನಗೆ ಗೋತ್ತಿರುವುದಿಲ್ಲ ಅಂತ ನುಡಿಯುತ್ತಾರೆ.

3. ಅದೇ ರೀತಿ ನನ್ನ ಚಿಕ್ಕಪ್ಪನಾದ ಬಾಷಸಾಬ್ ಅಂದರೆ 12 ನೇ ಪ್ರತಿವಾದಿಯ ಗಂಡ ಕಡಕೊಳ ಗ್ರಾಮದಲ್ಲಿ ಇರುತ್ತಿದ್ದನು. ಕಡಕೊಳದಲ್ಲಿ ಸದರಿಯವರು ಮನೆ ಇದೆಯೋ ಅಥವಾ ಇಲ್ಲವೊ ನನಗೆ ಗೊತ್ತಿರುವುದಿಲ್ಲ.

4. ಅದೇ ರೀತಿ ಇನ್ನೊಬ್ಬ ಚಿಕ್ಕಪ್ಪನಾದ ಹುಸೇನಸಾಬ ಅಂದರೆ 19 ನೇ ಪ್ರತಿವಾದಿ ಗಂಡ ವನಕಿಹಾಳ ಗ್ರಾಮದಲ್ಲಿ ವಾಸವಾಗಿರುತಾರೆ. ಸದರಿಯವರು ವಾಸವಾಗಿರುವ ಮನೆ ನಂಬರ ನನಗೆ ಗೊತ್ತಿರುವುದಿಲ್ಲ. ನಮ್ಮ ಅಜ್ಜನ ಮನೆತನಕ್ಕೆ ಕ್ಷೇತ್ರ 4 ಎಕರೆ 28 ಗುಂಟೆ ಜಮೀನು ಮಾತ್ರ ಇರುತ್ತದೆ, ಆದರೆ ಯಾವುದೇ ಮನೆ ಇರುವುದಿಲ್ಲ ಅಂತ ನುಡಿಯುತ್ತಾರೆ.

5. ನಾನು ದಾವಾ ಆಸ್ತಿಯ ಪಹಣಿಗಳನ್ನು ನೋಡಿರುತ್ತೇನೆ. ಸದರಿ ಪಹಣಿ ಮೊದಲು ನಮ್ಮ ಅಜ್ಜನ ಹೆಸರಿನಲ್ಲಿ ಇತ್ತು. ನನ್ನ ಅಜ್ಜನ ಮರಣ ಪ್ರಮಾಣ ಪತ್ರವನ್ನು ನಾನು 2025 ರಲ್ಲಿ ಪಡೆದಿರುತ್ತೇನೆ. ನನ್ನ ಅಜ್ಜ ಯಾವಾಗ ತಿರಿಕೊಂಡಿತ್ತಾನೆ ಎನ್ನುವ ಸಂಗತಿಯನ್ನು ನನ್ನ ತಂದೆ ಹೇಳಿರುತ್ತಾರೆ. ಸದರಿ ಮರಣ ದಾಖಲೆಯನ್ನು ನನ್ನ ತಂದೆ ಮಾಡಿರುತ್ತಾನೆ. ನಾನು ಅರ್ಜಿ ಕೊಟ್ಟಿದ್ದರಿಂದ ನನಗೆ ತಹಸಿಲ್ದಾರ ಸುರಪುರ ಇವರು ಮರಣ ಪ್ರಮಾಣ ಪತ್ರ ಕೊಟ್ಟಿರುತ್ತಾರೆ. ನನ್ನ ಅಜ್ಜ ಇಂತಹದೆ ದಿನ ತೀರಿಕೊಂಡಿರುತ್ತಾನೆ ಎಂದು ನ್ಯಾಯಾಲಯದ ಮುಂಖಾಂತರ ಆದೇಶದ ಪಡೆದುಕೊಂಡು ಹೊಸದಾಗಿ ನಾನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

6. ನನ್ನ ಅಜ್ಜ ತೀರಿಕೊಂಡ ನಂತರ ನನ್ನ ತಂದೆ ಹೆಸರು ದಾಖಲಾಗಿತ್ತದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನನ್ನ ತಂದೆ ತೀರಿಕೊಳ್ಳುವ 4 ವರ್ಷಗಳ ಮುಂಚೆ ದಾಖಲಾಗಿರುತ್ತದೆ ಎಂದು ನುಡಿಯುತ್ತಾರೆ. ನನ್ನ ಅಜ್ಜನ ಹೆಸರು ಕಡಿಮೆ ಮಾಡಿ ನನ್ನ ತಂದೆ ಹೆಸರು ದಾಖಲಿಸಲು ಯಾರು ಅರ್ಜಿ ಕೊಟ್ಟಿರುತ್ತಾರೆ ಅಂತ ಕೇಳಲು ಊರಿನ ಪ್ರಮುಖರು ಅರ್ಜಿ ಕೊಟ್ಟು ನನ್ನ ತಂದೆ ಹೆಸರು ದಾಖಲಿಸಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಅರ್ಜಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ, ಅದಕ್ಕೆ ಸಂಬಂಧಿಸಿದಂತೆ ಮುಟೇಷನ್ ಲಭ್ಯ ಇಲ್ಲ ಎಂದು ಹಿಂಬರ ಕೊಟ್ಟರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಹಿಂಬರ ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನಮ್ಮ ಅಜ್ಜನಿಂದ ನನ್ನ ತಂದೆಗೆ ಯಾವ ರೀತಿ ಬಂತು ಅಂತ ತೋರಿಸಲು ದಾಖಲೆಗಳು ಇಲ್ಲ ಆದರೆ ಪಹಣಿ ಇರುತ್ತದೆ ಎಂದು ನುಡಿಯುತ್ತಾರೆ.

7. ನನ್ನ ತಂದೆಯೆ ಮನೆಯ ಹಿರಿಯ ಎಂದರೆ ನಿಜ. ನನ್ನ ಅಜ್ಜ ತೀರಿಕೊಂಡ ನಂತರ ನನ್ನ ತಂದೆ ಮನೆಯ ಹಿರಿಯತನ ನೋಡಿಕೊಳ್ಳುತ್ತಿದ್ದನು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದು ವರೆದು ನನ್ನ ತಂದೆ ಹೇಳುತ್ತಿದ್ದರು ಎಂದು ನುಡಿಯುತ್ತಾರೆ. ನನ್ನ ಅಜ್ಜ ತೀರಿಕೊಂಡಾಗ ನಾನು 4-5 ವರ್ಷದವನು ಇದ್ದೇನು. ನನ್ನ ತಾಯಿಗೆ ನಡೆಯಲು ಬರುವುದಿಲ್ಲ. ಉಳಿದ ಮಕ್ಕಳು ಚಿಕ್ಕವರು ಇದ್ದು ನನ್ನ ತಂದೆಯೆ ಹಿರಿಯವನು ಆಗಿದ್ದರಿಂದ, ಎಲ್ಲರಿಗೆ ಗೊತ್ತಾಗದಂತೆ ತಾನೇ ತನ್ನ ಹೆಸರನ್ನು ದಾಖಲಿಸಿಕೊಂಡಿರುತ್ತಾನೆ ಎಂದರೆ ಸರಿಯಲ್ಲ. ನನ್ನ ಅಜ್ಜ ತೀರಿಕೊಂಡ ನಂತರ ನನ್ನ ತಂದೆ ಹೆಸರಿನಲ್ಲಿ ದಾಖಲಾಗಿದನ್ನು ದುರುಪಯೋಗ ಪಡಿಸಿಕೊಂಡು, ನನ್ನ ತಂದೆ ತೀರಿಕೊಂಡ ನಂತರ ನಾವು ಸದರಿ ಆಸ್ತಿ ಮಾರಾಟ ಮಾಡಿರುತ್ತೇವೆ ಎಂದರೆ ಸರಿಯಲ್ಲ.

8. ನನ್ನ ತಂದೆ ತೀರಿಕೊಂಡು 2 ವರ್ಷಗಳು ಆಗಿರುತ್ತದೆ. ನನ್ನ ತಂದೆ ಜೀವಂತ ಇರುವವರೆಗೂ ಹೊಲದಿಂದ ಬಂದ ಆಧಾಯದಲ್ಲಿ ಎಲ್ಲರಿಗೂ ಪಾಲು ನೀಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಂದೆ ತೀರಿಕೊಂಡ ನಂತರ ವಾದಿಯರಿಗೆ ಮೋಸ ಮಾಡಬೇಕು ಎನ್ನುವ ಉದ್ದೇಶದಿಂದ ದಾವಾ ಆಸ್ತಿಯನ್ನು ನನ್ನ ಹೆಸರಿಗೆ ದಾಖಲಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಅಜ್ಜ ದಾವಾ ಆಸ್ತಿಯನ್ನು ಬಾಯಿ ಮಾತಿನ ಮುಖಾಂತರ ದಾನ ಮಾಡಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ಬಾಬಾಸಾಬ ಮತ್ತು ಬಂದಗಿಸಾಬ ಎನ್ನುವವರು ಹಾಜರು ಇದ್ದರು ಎಂದು ಸುಳ್ಳ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಊರಿನ ಮುಖಂಡರೇ ನನ್ನ ತಂದೆ ಹೆಸರಲ್ಲಿ ದಾಖಲಿಸುವ ಅರ್ಜಿ ಕೊಟ್ಟಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯರಿಗೆ ಆಸ್ತಿ ಕೊಡಬೇಕೆಂದು ಸುಳ್ಳು ತಕರಾರು ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯರು ಬಾಬಸಾಬ ಮಕ್ಕಳು ಆಗಿದ್ದರಿಂದ ಆತನು ತೀರಿಕೊಂಡ ನಂತರ ವಾದಿಯರಿಗೆ ಸಹಿತ ಇಸ್ಸಾ ಇರುತ್ತದೆ ಎಂದರೆ ಸರಿಯಲ್ಲ. ನನ್ನ ಅಜ್ಜ ತೀರಿಕೊಂಡ ನಂತರ ನನ್ನ ತಂದೆ ಹೆಸರಿನಲ್ಲಿ ದಾವಾ ಆಸ್ತಿ ದಾಖಲಾಗಿರುತ್ತದೆ ಎಂದರೆ ಸರಿಯಲ್ಲ.

**ಮರು ವಿಚಾರಣೆ: ಶ್ರೀ ಎಂ.ಹೆಚ್ ವಕೀಲರಿಂದ**

ಬಾವಾಸಾಬ ತಂದೆ ಬಂದಗಿಸಾಬ ಸಿಪಾಯಿ ಅವರು ಜೀವಂತವಾಗಿರುತ್ತಾರೆ. ಎರಡನೇ ಸಾಕ್ಷಿದಾರರನಾದ ಬಂದಗಿಸಾಬ ತಂದೆ ಕಾಶಿಂ ಸಾಬ ಇತನು ಪೋತಿಯಾಗಿತ್ತಾನೆ.

**ಪಾಟಿ ಸವಾಲುಃ ಶ್ರೀಮತಿ ಎಸ್.ಎಂ. ಪಿ ವಕೀಲರು ಮರು ಪಟೀ ಸವಾಲಿಗೆ ಕಾಲವಕಾಶ ಕೋರಿದ್ದರಿಂದ ಕಾಲವಕಾಶ ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ. ಹೇ.ಕೇ. ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು,
ಶೋರಾಪುರ.